1	2	3	4	5	6
		4 ಇಂಗಳಗಿ		4 ಯರಗುಪ್ಪಿ	
		5 ಮತ್ತಿಗಟ್ಟಿ		5 ಮಳಲಿ	
		6 ಹಿರೇಗುಂ ಜಾಳ		6 ಯರಬೂದಿ ಹಾಳ	
		7 ಪಶುಪತಿ ಹಾಳ		7 ಭರಂದವಾಡ	
				8 ಕಳಸ	
4	1 ಕಲಘಟಗಿ	1 ಮಿಶ್ರೀಕೋಟಿ		1 ಹಿರೇಹೊನ್ನ ಹಳ್ಳಿ	ಕಲಘಟಗಿ
		2 ಸಂಗಮೇಶ್ವರ		2 ಗಲಗಿಹುಲಿ ಕೊಪ್ಪ	
		3 ತಾವರಗೇರಿ		3 ದೇವಿಕೊಪ್ಪ	
		4 ಮುಕ್ಕಾಲ್		4 ತಬಕದ ಹೊನ್ನಾಳ್ಳಿ	
		5 ದುಮ್ಮಾವಾಡ್		5 ಗಂಡರಟ್ಟಿ	
		6 ಸುರಶೆಟ್ಟಿ ಕೊಪ್ಪ		6 ಕೊಡ್ಲಗಿ	
				7 ಮುತ್ತಗಿ	
				8 ಜಿ.ಬ ರವನ ಕೊಪ್ಪ	
5	1 ನವಲಗುಂದ	1 ಅಣ್ಣಿಗೇರಿ	1 ತಿರ್ಲಪುರ	1 ಕೊಂಡಿ ಕೊಪ್ಪ	ನವಲ ಗುಂದ
		2 ತಡಹಾಳ	2 ನಲವಡಿ	2 ಕಲವಾಡ	
		3 ಮೊರಬ	3 ಶಿರಕೋಳ	3 ಅರಕೇರಹಟ್ಟಿ	
		4 ಶೆಲವಾಡಿ		4 ಭದ್ರಾಪೂರ	
		5 ಜಾವೂರು		5 ಹಳ್ಳಿಕೇರಿ	
		6 ಆಳಗ ವಾಡಿ		6 ನಲವಡಿ	
		7 ಶಿಕುವಿನ ಹಳ್ಳಿ			

ಅನುಬಂಧ – 1

ಚುಕ್ಕೆ ಗುರುತ್ತಿಲ್ಲದ ಲಿಖಿತ ಮೂಲಕ ಪ್ರಶ್ನೆಗಳಿಗೆ ನೀಡಲಾದ ಪ್ರಶ್ನೋತ್ತರಗಳು.

1298(1587) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ 6 ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸಲು 2005 ಮತ್ತು 2006ನೇ ಸಾಲಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಹಾಗಿದ್ದಲ್ಲಿ, ಬಾಕಿ ಉಳಿದಿರುವ ಮೊಬಲಗು ಎಷ್ಟು;

ಇ) ಉಳಿದ ಅನುದಾನ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿನ 6 ನೂತನ ವೈದ್ಯಕೀಯ ಕಾಲೇಜುಗಳ ಮೊದಲನೇ ಹಂತದ ಕಾಮಗಾರಿಗೆ ಇದುವರೆಗೆ ಒಟ್ಟು 90 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

2005–06ನೇ ಸಾಲಿನಲ್ಲಿ – ರೂ. 85 ಕೋಟಿ

2006–07ನೇ ಸಾಲಿನಲ್ಲಿ ಇಲ್ಲಿಯವರೆಗೆ – ರೂ.5 ಕೋಟಿ

ಕ್ರಮ ಸಂಖ್ಯೆ	ಕಾಲೇಜು	ಉಳಿದ ಹಣ
1	ಬೆಳಗಾಂ	3,32,66,968
2	ಮಂಡ್ಯ	2,00,00,000
3	ಶಿವಮೊಗ್ಗ	1,09,75,764
4	ಹಾಸನ	3,81,63,309
5	ಬೀದರ್	3,75,00,000
6	ರಾಯಚೂರು	5,00,00,000

ಆ) ಅಗತ್ಯವಿರುವ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು.

1299(1588) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1 ರಿಂದ 7ನೇ ತರಗತಿವರೆವಿಗೆ ಓದುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮತ್ತು ಹೆಣ್ಣು ಮಕ್ಕಳ ಹಾಜರಾತಿ ವಿದ್ಯಾರ್ಥಿ ವೇತನವನ್ನು ಸರ್ಕಾರ ತಡೆ ಹಿಡಿಯಲಾಗಿದೆಯೇ;

ಆ) ಇದರಿಂದಾಗಿ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಗೊಳಗಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈಗಾಗಲೇ ಹೊರಡಿಸಲಾದ ಸರ್ಕಾರದ ಆದೇಶವನ್ನು ತಡೆ ಹಿಡಿದು ಮೊದಲಿನಂತೆ ವಿದ್ಯಾರ್ಥಿ ವೇತನವನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ. ಜಾರಕಿಹೂಳಿ (ಸಮಾಜ ಕಲ್ಯಾಣ ಸಚಿವರು) :

ಅ) 1 ರಿಂದ 7ನೇ ತರಗತಿವರೆಗಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಪೂರಕ ಅಂದಾಜಿನಲ್ಲಿ ರೂ. 9.92